ಫೋನ್ ನಂ. 080-22243926
ಪ್ಯಾಕ್ಸ್ ನಂ. 080-22110134

ವೆಬ್ ಸೈಟ್: www.kptcl.karnataka.gov.in
ಇ-ಮೇಲ್: gmtkptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN):U40109KA1999SGC025521

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560009,

**ವಿಷಯ:** ಮೆ॥ ಬಿ.ಎಂ.ಆರ್.ಸಿ.ಎಲ್ ರವರ ವತಿಯಿಂದ ಸ್ವಯಂ-ನಿರ್ವಹಣೆ ಆಧಾರದ ಮೇಲೆ ನಿರ್ವಹಿಸಲಾಗುವ ಕವಿಪ್ರನಿನಿಯ ಪ್ರಸರಣ ಮಾರ್ಗಗಳನ್ನು ಮಾರ್ಪಾಡು/ಸ್ಥಳಾಂತರಿಸುವ ಕಾಮಗಾರಿಗಳ ಅಂದಾಜು ವೆಚ್ಚದ ಮೇಲೆ ಶೇ. 2.5% ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ನಿಗದಿಪಡಿಸುವ ಕುರಿತು.

**ಉಲ್ಲೇಖ:**
1. ದಿನಾಂಕ: 28.04.2022 ರಂದು ನಡೆದ ಬಿ.ಎಂ.ಆರ್.ಸಿ.ಎಲ್ ನ 43ನೇ ಉನ್ನತ ಅಧಿಕಾರ ಸಮಿತಿ (HPC) ಸಭೆಯ ನಡಾವಳಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: UDD P.R.J 2021 ದಿನಾಂಕ: 17.05.2022.
3. ದಿನಾಂಕ: 04.08.2022 ರಂದು ನಡೆದ 132ನೇ ಮಂಡಳಿ ನಿರ್ದೇಶಕರುಗಳ ಸಭೆಯ ನಡಾವಳಿಗಳು.

*********

EE (IT)
EE (IT)-1
EE (IT) (RS&DC)
EE (MIS)
DCA (IT)
SE (IT & MIS)
KPTCL

**ಮುನ್ನುಡಿ:**

ಕವಿಪ್ರನಿನಿ ಗೆ ನಿಗದಿತ ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸುವ ಮೂಲಕ ಸರ್ಕಾರಿ/ಖಾಸಗಿ ಸಂಸ್ಥೆಗಳು ವಿದ್ಯುತ್ ಸರಬರಾಜು ಪಡೆಯಲು, ಅಸ್ತಿತ್ವದಲ್ಲಿರುವ ಪ್ರಸರಣ ಮಾರ್ಗಗಳ ಮಾರ್ಪಾಡು / ಸ್ಥಳಾಂತರ ಕಾಮಗಾರಿಗಳನ್ನು ಸ್ವಯಂ-ನಿರ್ವಹಣೆ ಯೋಜನೆಯಡಿಯಲ್ಲಿ ಕೈಗೊಳ್ಳುತ್ತಿರುತ್ತಾರೆ.

ದಿನಾಂಕ: 27.06.2018 ರ ನಿಗಮದ ಆದೇಶದನ್ವಯ ಸರ್ಕಾರಿ/ಖಾಸಗಿ ಸಂಸ್ಥೆಗಳು ಕೈಗೆತ್ತುಕೊಳ್ಳುವ ಸ್ವಯಂ-ನಿರ್ವಹಣೆ ಕಾಮಗಾರಿಗಳಿಗೆ ಅನ್ವಯವಾಗುವ ಸ್ಲ್ಯಾಬ್-ವಾರು ಮೇಲ್ವಿಚಾರಣಾ ಶುಲ್ಕಗಳನ್ನು ಪಡೆಯಲಾಗುತ್ತಿದೆ.

ಈಗ, ಪತ್ರ ಸಂಖ್ಯೆ: UDD P.R.J 2021 ದಿನಾಂಕ: 17.05.2022 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರು ದಿನಾಂಕ: 28.04.2022 ರಂದು ನಡೆದ ಬಿ.ಎಂ.ಆರ್.ಸಿ.ಎಲ್ ನ 43ನೇ ಉನ್ನತ ಅಧಿಕಾರ ಸಮಿತಿ (HPC) ಸಭೆಯ ಸಭಾ ನಡಾವಳಿಯನ್ನು ಲಗತ್ತಿಸಿ ಸಭೆಯಲ್ಲಿ ಕೈಗೊಂಡ ತೀರ್ಮಾನದನ್ವಯ, ಸ್ವಯಂ ನಿರ್ವಹಣೆ ಕಾಮಗಾರಿಗಳ ಸ್ಲ್ಯಾಬ್-ವಾರು ಮೇಲ್ವಿಚಾರಣಾ ಶುಲ್ಕಗಳು ಬಿ.ಎಂ.ಆರ್.ಸಿ.ಎಲ್‌ಗೆ ಭಾರಿ ವೆಚ್ಚ ಉಂಟುಮಾಡುತ್ತಿರುವುದರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಸ್ವಯಂ ನಿರ್ವಹಣೆ ಕಾಮಗಾರಿಗಳಿಗೆ ಮೇಲ್ವಿಚಾರಣಾ ಶುಲ್ಕವನ್ನು ಅನುಮೋದಿತ ಅಂದಾಜು ವೆಚ್ಚದ ಶೇ. 2.5% ಕ್ಕೆ ಮಿತಿಗೊಳಿಸಿದಂತೆ ಬಿ.ಎಂ.ಆರ್.ಸಿ.ಎಲ್ ನ ಕಾಮಗಾರಿಗಳಿಗೂ ಸಹ ಶೇ. 2.5% ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ನಿಗದಿಪಡಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಸದರಿ ವಿಷಯವನ್ನು ದಿನಾಂಕ: 04.08.2022 ರಂದು ನಡೆದ 132ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ವಿಷಯ ಸಂಖ್ಯೆ: 132/22 ರನ್ನು ಮಂಡಿಸಲಾಗಿತ್ತು. ವಿವರವಾದ ಚರ್ಚೆ ಮತ್ತು ಸಮಾಲೋಚನೆಗಳ ನಂತರ, ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಲಾಗಿದೆ:

SE (Tech MIS)

*"RESOLVED THAT for the reasons explained, approval be and is hereby accorded to fix the supervision charges for the works of M/s. BMRCL at a fixed percentage of 2.5% of the cost estimate similar to NHAI."*

*"FURTHER RESOLVED THAT General Manager (Technical), KPTCL is authorized to issue necessary orders in this regard".*

**ಆದ್ದರಿಂದ ಈ ಆದೇಶ,**

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ19/345/85-86** **ದಿನಾಂಕ:** 27 OCT 2022

ಮೆ॥ ಬಿ.ಎಂ.ಆರ್.ಸಿ.ಎಲ್ ಗೆ ಸಂಬಂಧಿಸಿದ ಸ್ವಯಂ ನಿರ್ವಹಣೆ ಆಧಾರದ ಮೇಲೆ ನಿರ್ವಹಿಸಲಾಗುವ ಕವಿಪ್ರನಿನಿಯ ಪ್ರಸರಣ ಮಾರ್ಗಗಳನ್ನು ಮಾರ್ಪಾಡು/ಸ್ಥಳಾಂತರಿಸುವ ಕಾಮಗಾರಿಗಳಿಗೆ ಮೇಲ್ವಿಚಾರಣಾ ಶುಲ್ಕವನ್ನು ಅನುಮೋದಿತ ಅಂದಾಜು ವೆಚ್ಚದ ಶೇ. 2.5% ಕ್ಕೆ ಮಿತಿಗೊಳಿಸಲು ಅನುಮೋದಿಸಿದೆ.

ಮೇಲಿನ ಮೇಲ್ವಿಚಾರಣಾ ಶುಲ್ಕಗಳನ್ನು ಅನ್ವಯಿಸುವ ತೆರಿಗೆಗಳೊಂದಿಗೆ ಸಂಗ್ರಹಿಸತಕ್ಕದ್ದು.

ಈ ಆದೇಶವು ಈ ಆದೇಶದ ದಿನಾಂಕದಿಂದ ಜಾರಿಗೆ ಬರುತ್ತದೆ.

27/10/22

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರು(ವಿ) ಕಾಮಗಾರಿ/ನಿರ್ವಹಣೆ/ ಕಾ ಮತ್ತು ನಿ, ಕವಿಪ್ರನಿನಿ.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು(ವಿ) ಕಾಮಗಾರಿ/ ಟಿಎಲ್&ಎಸ್ಎಸ್ ವಿಭಾಗಗಳು, ಕವಿಪ್ರನಿನಿ.
5. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ. ಮತ್ತು ಮಾ.ಸಂ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ.

**ಪ್ರತಿಯನ್ನು ಮಾಹಿತಿಗಾಗಿ:**

ಅಧೀಕ್ಷಕ ಇಂಜಿನಿಯರ್ (ವಿ), ಐ.ಟಿ, ಕವಿಪ್ರನಿನಿ ರವರಿಗೆ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಲು.